KA14040006492023

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, 2 ನೇ ನ್ಯಾಯಾಲಯ, ಶಿವಮೊಗ್ಗ.**

**ಉಪಸ್ಥಿತರುಃ- ಶ್ರೀ ಸಿದ್ದರಾಜು ಎನ್.ಕೆ.**

ಬಿ.ಎ., ಎಲ್.ಎಲ್.ಬಿ,

**ಜೆ.ಎಂ.ಎಫ್.ಸಿ. 2 ನೇ ನ್ಯಾಯಾಲಯ, ಶಿವಮೊಗ್ಗ.**

**ಸಿ.ಸಿ.ನಂ.508/2023**

**ದಿನಾಂಕಃ 24 ನೇ ಜುಲೈ 2026**

ಫಿರ್ಯಾದಿಃ ಸರ್ಕಾರದ ಪರವಾಗಿ ದೊಡ್ಡಪೇಟೆ ಪೊಲೀಸ್ ಠಾಣೆ,
ಶಿವಮೊಗ್ಗ.

**-ವಿರುದ್ಧ-**

ಆರೋಪಿತರುಃ ಲೊಕೇಶ್ ಎಚ್ ಜಿ ಬಿನ್ ಲೇಟ್ ಗಂಗಾಧರಯ್ಯ,
61 ವರ್ಷ, ವಾಸಃ ದುರ್ಗಿಗುಡಿ, 1 ನೇ ಕ್ರಾಸ್,
ಶಿವಮೊಗ್ಗ.

| | |
|---|---|
| 1. ಕೃತ್ಯ ಎಸಗಿದ ದಿನಾಂಕ | 25.02.2022 |
| 2. ಅಪರಾಧ ವರದಿ ಮಾಡಿದ ದಿನಾಂಕ | 01.03.2022 |
| 3. ಫಿರ್ಯಾದುದಾರ/ಬಾತ್ಮಿದಾರರ ಹೆಸರು | ಶ್ರೀಮತಿ ಆಶಾ ಪ್ರಕಾಶ್ |
| 4. ಸಾಕ್ಷಿದಾರರ ವಿಚಾರಣೆ ಪ್ರಾರಂಭವಾದ ದಿನಾಂಕ | 17.03.2026 |
| 5. ಸಾಕ್ಷಿದಾರರ ವಿಚಾರಣೆ ಕೊನೆಗೊಂಡ ದಿನಾಂಕ | 17.06.2026 |
| 6. ದೂಷಿಸಲಾದ ಆರೋಪಗಳು | ಭಾರತೀಯ ದಂಡ ಸಂಹಿತೆ ಕಲಂ 504, 324,506. |

| | |
|---|---|
| 7. ನ್ಯಾಯಾಧೀಶರ ಅಭಿಪ್ರಾಯ | ಅಂತಿಮ ಆದೇಶದಂತೆ |
| 8. ಪಿರ್ಯಾದುದಾರರ ಪರ ವಕೀಲರು | ಎ.ಪಿ.ಪಿ. |
| 9. ಆರೋಪಿ ಪರ ವಕೀಲರು | ಆರೋಪಿತರ ಪರ ಶ್ರೀ **ವಿ.ಎ.ಸಿ.**, ವಕೀಲರು. |

**ತೀರ್ಪು**

ಶಿವಮೊಗ್ಗ ನಗರ, ದೊಡ್ಡಪೇಟೆ ಪೊಲೀಸ್ ಠಾಣೆಯ ಸಬ್ ಇನ್ಸ್ ಪೆಕ್ಟರ್ ರವರು ಆರೋಪಿ ವಿರುದ್ಧ ಭಾರತೀಯ ದಂಡ ಸಂಹಿತೆ,ಕಲಂ.504, 324, 506 ರಡಿಯಲ್ಲಿ ಅಪರಾಧ ಎಸಗಿರುತ್ತಾರೆಂದು ಆರೋಪಿಸಿ ಈ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತಿದೆಃ-**

ದಿನಾಂಕ 25-02-2022 ರಂದು ಮಧ್ಯಾಹ್ನ 3-00 ಗಂಟೆ ಸಮಯದಲ್ಲಿ ದೊಡ್ಡಪೇಟೆ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ್ದ ದುರ್ಗಿಗುಡಿ 1 ನೇ ಸಮಾನಾಂತರ ರಸ್ತೆಯಲ್ಲಿರುವ ಚಾಸಾ-1 ರವರಿಗೆ ಸೇರಿದ್ದ ಮಳಿಗೆಯನ್ನು ಆರೋಪಿಯು ಅಕ್ರಮವಾಗಿ ಬೇರೆಯವರಿಗೆ ಬಾಡಿಗೆ ನೀಡಿದ ವಿಚಾರವನ್ನು ಚಾಸಾ-1 ರವರು ಕೇಳಿದ್ದಕ್ಕೆ, ಆರೋಪಿಯು ಏಕಾಏಕಿ ಚಾಸಾ-1 ರವರಿಗೆ ಅವಾಚ್ಯವಾಗಿ ಬೈದು, ಕೋಲು ಹಾಗೂ ಬ್ಯಾನರ್ ಗೆ ಹಾಕಿದ್ದ ರಾಡುಗಳನ್ನು ತೆಗೆದುಕೊಂಡು ಕಂಪ್ಲೇಂಟ್ ನೀಡಿದಲ್ಲಿ ಜೀವಂತ ಉಳಿಸುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ. ನಂತರ ಚಾಸಾ.1 ರವರು ದೊಡ್ಡಪೇಟೆ ಪೊಲೀಸ್ ಠಾಣೆಯಲ್ಲಿ ನಿಪಿ.1 ರಂತೆ ದೂರನ್ನು ನೀಡಿರುತ್ತಾರೆ. ನಂತರ ಚಾಸಾ.6 ರವರು ದೂರನ್ನು ಪಡೆದುಕೊಂಡು, ಆರೋಪಿ ವಿರುದ್ಧ ಅಪರಾಧ ಸಂಖ್ಯೆ 117/2022 ರಂತೆ ಭಾರತೀಯ ದಂಡ ಸಂಹಿತೆ ಕಲಂ.504, 324, 506 ರಡಿಯಲ್ಲಿ ಪ್ರಥಮ

ವರ್ತಮಾನ ವರದಿಯನ್ನು ದಾಖಲಿಸಿರುತ್ತಾರೆ ಮತ್ತು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿ, ನಂತರ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ, ಚಾಸಾ.4 ಮತ್ತು 5 ರವರ ಸಮಕ್ಷಮ ಚಾಸಾ.1 ರವರು ತೋರಿಸಿದ ಸ್ಥಳದಲ್ಲಿ ಪಂಚನಾಮ ಕ್ರಮ ಜರುಗಿಸಿರುತ್ತಾರೆ, ನಂತರ ಚಾಸಾ.2 ಮತ್ತು 3 ರವರ ಹೇಳಿಕೆ ದಾಖಲಿಸಿರುತ್ತಾರೆ. ನಂತರ ತನಿಖೆ ಪೂರ್ಣಗೊಳಿಸಿ ಆರೋಪಿ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ.

3. ದಿನಾಂಕಃ 15.09.2025 ರಂದು ಆರೋಪಿ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಅರ್ಜಿಯನ್ನು ದಾಖಲಿಸಿರುತ್ತಾರೆ. ಸದರಿ ಅರ್ಜಿಯನ್ನು ನ್ಯಾಯಾಲಯವು ಪುರಸ್ಕರಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತದೆ. ನಂತರ ನ್ಯಾಯಾಲಯವು ಆರೋಪಿ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.504, 324, 506 ರಡಿಯಲ್ಲಿ ಸಂಜ್ಞೆಯನ್ನು ತೆಗೆದುಕೊಂಡಿರುತ್ತದೆ ಹಾಗೂ ಆರೋಪಿಗೆ ಸಮನ್ಸ್ ನ್ನು ನೀಡಿರುತ್ತದೆ. ನ್ಯಾಯಾಲಯದಿಂದ ಸಮನ್ಸ್ ಜಾರಿ ಆದ ನಂತರ ಆರೋಪಿ ತಮ್ಮ ವಕೀಲರ ಮುಾಲಕ ನ್ಯಾಯಾಲಯಕ್ಕೆ ಹಾಜರಾಗಿರುತ್ತಾರೆ. ದಂಡ ಪ್ರಕ್ರಿಯಾ ಸಂಹಿತೆ ಕಲಂ.207 ರಂತೆ ದೋಷಾರೋಪಣೆ ಪಟ್ಟಿ ಹಾಗೂ ಇತರೆ ದಾಖಲೆಗಳನ್ನು ಆರೋಪಿಗೆ ಪೂರೈಸಲಾಗಿರುತ್ತದೆ.

4. ದೋಷಾರೋಪಣೆಯನ್ನು ರಚಿಸುವ ಮೊದಲು ಉಭಯ ಪಕ್ಷಗಳ ವಾದವನ್ನು ಆಲಿಸಲಾಯಿತು. ಈ ಹಂತದಲ್ಲಿ ಆರೋಪಿಯನ್ನು ಬಿಡುಗಡೆಗೊಳಿಸಲು ಯಾವುದೇ ಸಕಾರಣಗಳು ಕಂಡು ಬಂದಿರುವುದಿಲ್ಲ. ಆದ್ದರಿಂದ ನ್ಯಾಯಾಲಯವು ಆರೋಪಿ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.504, 324, 506 ರಡಿಯಲ್ಲಿ ದೋಷಾರೋಪಣೆಯನ್ನು ರಚಿಸಿ, ಆರೋಪಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಲಾಗಿದ್ದು, ಆರೋಪಿ ಸದರಿ ಆರೋಪಣೆಯನ್ನು

ನಿರಾಕರಿಸಿದ್ದು, ವಿಚಾರಣೆಯಾಗಬೇಕೆಂದು ತಿಳಿಸಿರುತ್ತಾರೆ. ಆದ್ದರಿಂದ ಸಾಕ್ಷಿ ವಿಚಾರಣೆಗಾಗಿ ಪ್ರಕರಣವನ್ನು ನಿಗಧಿಗೊಳಿಸಲಾಗಿರುತ್ತದೆ.

5. ಅಭಿಯೋಜನೆಯು ಆರೋಪಿ ವಿರುದ್ದದ ಅಪರಾಧವನ್ನು ಸಾಬೀತು ಪಡಿಸಲು ದೋಷಾರೋಪಣ ಪಟ್ಟಿಯಲ್ಲಿ 1 ರಿಂದ 6 ಜನ ಸಾಕ್ಷಿದಾರರನ್ನು ತೋರಿಸಿರುತ್ತಾರೆ. ಆದರೆ ಸಹಾಯಕ ಸರ್ಕಾರಿ ಅಭಿಯೋಜಕರು ಒಟ್ಟು 4 ಜನ ಸಾಕ್ಷಿದಾರರನ್ನು ಪ್ರಾಸಾ.1 ರಿಂದ 4 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ ಮತ್ತು ತಮ್ಮ ಪರವಾಗಿ ನಿಪಿ.1 ರಿಂದ 8 ದಾಖಲೆಗಳನ್ನು ಹಾಗೂ ವಶಪಡಿಸಿಕೊಂಡ ಭೌತಿಕ ವಸ್ತುಗಳನ್ನು ಮುದ್ದೆಮಾಲು-1 ಮತ್ತು 2 ಎಂದು ಗುರುತಿಸಿಕೊಂಡಿರುತ್ತಾರೆ.

6. ಅಭಿಯೋಜನೆ ಪರ ಸಾಕ್ಷಿ ವಿಚಾರಣೆ ಮುಗಿದ ನಂತರ ದಂಡ ಪ್ರಕ್ರಿಯೆ ಸಂಹಿತೆ ಕಲಂ. 313(1)(ಬಿ) ರಡಿಯಲ್ಲಿ ಅಭಿಯೋಜನೆಯ ವಿಚಾರಣೆಯಲ್ಲಿ ಆರೋಪಿ ವಿರುದ್ಧದ ಅಪರಾಧವನ್ನು ಸೂಚಿಸುವಂತಹ ಹೇಳಿಕೆಗಳನ್ನು ಆರೋಪಿಗೆ ಓದಿ ಹೇಳಲಾಯಿತು. ಸದರಿ ಹೇಳಿಕೆಗಳನ್ನು ಆರೋಪಿ ಸುಳ್ಳು ಎಂದು ಅಲ್ಲಗಳೆದಿರುತ್ತಾರೆ ಹಾಗೂ ತನ್ನ ಪರವಾಗಿ ಯಾವುದೇ ವಿಚಾರಣೆ ಮಾಡಿಕೊಂಡಿರುವುದಿಲ್ಲ ಹಾಗೂ ತಮ್ಮ ಪರವಾಗಿ ಯಾವುದೇ ದಾಖಲಾತಿಗಳನ್ನು ಗುರುತಿಸಿಕೊಂಡಿರುವುದಿಲ್ಲ.

7. ಉಭಯ ಪಕ್ಷಗಳ ವಾದ ವಿವಾದವನ್ನು ಕೇಳಲಾಯಿತು ಮತ್ತು ನ್ಯಾಯಾಲಯದ ಸಮ್ಮುಖದಲ್ಲಿರುವ ಮೌಖಿಕ ಮತ್ತು ದಾಖಲಾತಿ ಸಾಕ್ಷಿಗಳನ್ನು ಕೂಲಂಕುಷವಾಗಿ ಅವಲೋಕಿಸಲಾಯಿತು.

8. ಈ ನ್ಯಾಯಾಲಯದ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸುತ್ತವೇಃ-

1. ದಿನಾಂಕ 25–02–2022 ರಂದು ಮಧ್ಯಾಹ್ನ 3–00 ಗಂಟೆ ಸಮಯದಲ್ಲಿ ದೊಡ್ಡಪೇಟೆ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ್ದ ದುರ್ಗಿಗುಡಿ 1 ನೇ ಸಮಾನಾಂತರ ರಸ್ತೆಯಲ್ಲಿರುವ ಚಾಸಾ–1 ರವರಿಗೆ ಸೇರಿದ್ದ ಮಳಿಗೆಯನ್ನು ಆರೋಪಿಯು ಅಕ್ರಮವಾಗಿ ಬೇರೆಯವರಿಗೆ ಬಾಡಿಗೆ ನೀಡಿದ ವಿಚಾರವನ್ನು ಚಾಸಾ–1 ರವರು ಕೇಳಿದ್ದಕ್ಕೆ ಆರೋಪಿ ಚಾಸಾ–1 ರವರಿಗೆ ಅವಾಚ್ಯವಾಗಿ ಬೈದಿರುತ್ತಾರೆ. ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.504 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಬೀತು ಪಡಿಸುತ್ತದೆಯೇ?

2. ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಯು ಕೋಲು ಹಾಗೂ ಬ್ಯಾನರ್ ಗೆ ಹಾಕಿದ್ದ ರಾಡುಗಳಿಂದ ಚಾಸಾ–1 ರವರಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾರೆ. ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.324 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಬೀತು ಪಡಿಸುತ್ತದೆಯೇ?

3. ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿ ಚಾಸಾ–1 ರವರಿಗೆ ಕಂಪ್ಲೇಂಟ್ ನೀಡಿದಲ್ಲಿ ಜೀವಂತ ಉಳಿಸುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ. ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.506 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಬೀತು ಪಡಿಸುತ್ತದೆಯೇ?

3. ಯಾವ ಆದೇಶ ?

9. ಈ ಮೇಲ್ಕಂಡ ಅಂಶಗಳಿಗೆ ನ್ಯಾಯಾಲಯವು ಈ ಕೆಳಕಂಡಂತೆ ಉತ್ತರಿಸಿದ್ದೇನೆ

ಅಂಶ ಸಂಖ್ಯೆ1 : ನಕಾರಾತ್ಮಕವಾಗಿ
ಅಂಶ ಸಂಖ್ಯೆ2 : ನಕಾರಾತ್ಮಕವಾಗಿ
ಅಂಶ ಸಂಖ್ಯೆ3 : ನಕಾರಾತ್ಮಕವಾಗಿ
ಅಂಶ ಸಂಖ್ಯೆ4 : ಅಂತಿಮ ಆದೇಶದಂತೆ

ಈ ಕೆಳಕಂಡ ಕಾರಣಗಳಿಗಾಗಿ;

## ಕಾರಣಗಳು

10. **ಅಂಶ ಸಂಖ್ಯೆ1 ರಿಂದ 3:** ಈ ಅಂಶಗಳು ಒಂದಕ್ಕೊಂದು ಅಂತರಿಕ ಸಂಬಂಧ ಹೊಂದಿರುವುದರಿಂದ ಒಂದು ಅಂಶದ ಮೇಲಿನ ಚರ್ಚೆಯ ಸಂಗತಿಗಳು ಉಳಿದ ಅಂಶಗಳ ಮೇಲಿನ ಚರ್ಚೆಯಲ್ಲಿ ಪುನರಾವರ್ತನೆಯಾಗುವುದನ್ನು ತಪ್ಪಿಸುವ ಉದ್ದೇಶದಿಂದ ಏಕಕಾಲಕ್ಕೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

11. ದಿನಾಂಕ 25-02-2022ರಂದು ಮಧ್ಯಾಹ್ನ 3-00 ಗಂಟೆ ಸಮಯದಲ್ಲಿ ದೊಡ್ಡಪೇಟೆ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ್ದ ದುರ್ಗಿಗುಡಿ 1 ನೇ ಸಮಾನಾಂತರ ರಸ್ತೆಯಲ್ಲಿರುವ ಚಾಸಾ-1 ರವರಿಗೆ ಸೇರಿದ್ದ ಮಳಿಗೆಯನ್ನು ಆರೋಪಿಯು ಅಕ್ರಮವಾಗಿ ಬೇರೆಯವರಿಗೆ ಬಾಡಿಗೆ ನೀಡಿದ ವಿಚಾರವನ್ನು ಚಾಸಾ-1 ರವರು ಕೇಳಿದ್ದಕ್ಕೆ, ಆರೋಪಿಯು ಏಕಾಏಕಿ ಚಾಸಾ-1 ರವರಿಗೆ ಅವಾಚ್ಯವಾಗಿ ಬೈದು, ಕೋಲು ಹಾಗೂ ಬ್ಯಾನರ್ ಗೆ ಹಾಕಿದ್ದ ರಾಡುಗಳನ್ನು ತೆಗೆದುಕೊಂಡು ಕಂಪ್ಲೇಂಟ್ ನೀಡಿದಲ್ಲಿ ಜೀವಂತ ಉಳಿಸುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಎನ್ನುವ ಸಂಗತಿಗಳನ್ನು ನಿಸಂಶಯವಾಗಿ ಸಾಬೀತುಪಡಿಸುವ ಹೊಣೆ ಅಭಿಯೋಜನೆಯ ಮೇಲಿರುತ್ತದೆ.

12. ಸದರಿ ಸಂಗತಿಗಳನ್ನು ನಿಸಂಶಯವಾಗಿ ಸಾಬೀತುಪಡಿಸಲು ಅಭಿಯೋಜನೆಯು ವಿಫಲವಾದಲ್ಲಿ ವಿಚಾರಣೆಯಲ್ಲಿ ಉದ್ಭವಿಸುವ ಸಂಶಯದ ಲಾಭಗಳನ್ನು ಆರೋಪಿಗೆ ನೀಡಿ

ಬಿಡುಗಡೆಗೊಳಿಸತಕ್ಕದ್ದು ಎನ್ನುವುದು ಇತ್ಯರ್ಥ ಪಡಿಸಿದ ಕಾನೂನಾಗಿರುತ್ತದೆ. ಸದರಿ ಸಂಗತಿಗಳನ್ನು ಗಮದಲ್ಲಿರಿಸಿಕೊಂಡು ಅಭಿಯೋಜನೆಯು ಹಾಜರು ಪಡಿಸಿರುವ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಗಳನ್ನು ಚರ್ಚಿಸುವುದು ಸೂಕ್ತವಾಗಿರುತ್ತದೆ. ಅಭಿಯೋಜನೆಯು ಆರೋಪಿ ವಿರುದ್ಧದ ಅಪರಾಧವನ್ನು ಸಾಬೀತು ಪಡಿಸಲು ತಮ್ಮ ಪರವಾಗಿ 4 ಜನ ಸಾಕ್ಷಿದಾರರನ್ನು ಪ್ರಾಸಾ.1 ರಿಂದ 4 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ ಹಾಗೂ ನಿಪಿ.1 ರಿಂದ 8 ದಾಖಲೆಗಳನ್ನು ಹಾಗೂ ವಶಪಡಿಸಿಕೊಂಡು ಭೌತಿಕ ವಸ್ತುಗಳನ್ನು ಮುದ್ದೆಮಾಲು 1 ಮತ್ತು 2 ಎಂದು ಗುರುತಿಸಿರುತ್ತಾರೆ. ಸಾಕಷ್ಟು ಕಾಲಾವಕಾಶ ನೀಡಿದ ನಂತರವೂ ಅಭಿಯೋಜನೆಯು ಚಾಸಾ-2 ಮತ್ತು 3 ರವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ವಿಚಾರಣೆಗೆ ಒಳಪಡಿಸಿಸಲು ವಿಫಲವಾಗಿರುತ್ತದೆ. ಆದ್ದರಿಂದ ಅವರನ್ನು ವಿಚಾರಣೆಯಿಂದ ಕೈ ಬಿಡಲಾಗಿದೆ.

13. ಸಹಾಯಕ ಸರ್ಕಾರಿ ಅಭಿಯೋಜಕರು ತಮ್ಮ ವಾದವನ್ನು ಮಂಡಿಸುತ್ತಾ, ಚಾಸಾ-1ರವರು ದೂರುದಾರರಾಗಿದ್ದು, ಪ್ರಾಸಾ-2 ಮತ್ತು 3 ರವರು ಸ್ಥಳ ಪಂಚಾನಾಮೆಯ ಪಂಚಸಾಕ್ಷಿದಾರರಾಗಿದ್ದು, ಅಭಿಯೋಜನೆಯನ್ನು ಬೆಂಬಲಿಸಿ ಸಾಕ್ಷಿ ನುಡಿದಿರುತ್ತಾರೆ, ಆರೋಪಿತರು ದಿನಾಂಕ 25-02-2022ರಂದು ಮಧ್ಯಾಹ್ನ 3-00 ಗಂಟೆ ಸಮಯದಲ್ಲಿ ಆರೋಪಿತರು ದುರ್ಗಿಗುಡಿ ರಸ್ತೆಯಲ್ಲಿ ಇರುವ ಚಾಸಾ-1ರವರಿಗೆ ಸೇರಿದ ಮಳಿಗೆಯಲ್ಲಿ ಚಾಸಾ-1ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಕೋಲು ಮತ್ತು ರಾಡ್ ನಿಂದ ಪ್ರಾಸಾ-1ರವರಿಗೆ ಹೊಡೆದು ಕಂಪ್ಲೇಂಟ್ ನೀಡಿದಲ್ಲಿ ಜೀವಂತ ಉಳಿಸುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ. ಆ ನಂತರ ಚಾಸಾ-1ರವರು ದೊಡ್ಡಪೇಟೆ ಪೊಲೀಸ್ ಠಾಣೆಗೆ ದೂರು ನೀಡಿರುತ್ತಾರೆ. ಆ ನಂತರ ಪ್ರಸ್ತುತ ಪ್ರಕರಣ ದಾಖಲಾಗಿದ್ದು, ತನಿಖಾಧಿಕಾರಿಯು ಪ್ರಕರಣ ದಾಖಲಿಸಿ, ತನಿಖೆ ಕೈಗೊಂಡು, ತನಿಖೆ ಪೂರ್ಣಗೊಳಿಸಿ, ಅಂತಿಮ ವರದಿ ದಾಖಲಿಸಿರುತ್ತಾರೆ. ಪ್ರಾಸಾ-1 ರಿಂದ 4 ರವರು

ಸಂಪೂರ್ಣವಾಗಿ ಅಭಿಯೋಜನೆಯನ್ನು ಬೆಂಬಲಿಸಿ ಸಾಕ್ಷಿ ನುಡಿದಿರುತ್ತಾರೆ. ಸದರಿ ನುಡಿ ಸಾಕ್ಷ್ಯಕ್ಕೆ ಪೂರಕವಾಗಿ ಅಭಿಯೋಜನೆಯು ನಿಪಿ–1 ರಿಂದ 8 ದಾಖಲೆಗಳನ್ನು ಹಾಗೂ ಮುದ್ದೆಮಾಲುಗಳನ್ನು ಹಾಜರುಪಡಿಸಿರುತ್ತದೆ. ಸದರಿ ಸಂಗತಿಗಳಿಂದ ಆರೋಪಿ ಅಂತಿಮ ವರದಿಯಲ್ಲಿ ಹೇಳಿರುವ ಅಪರಾಧಗಳನ್ನು ಎಸಗಿರುತ್ತಾರೆ ಎಂದು ನಿಸಂಶಯವಾಗಿ ಸಾಭೀತುಪಡಿಸಿರುತ್ತದೆ. ಆದ್ದರಿಂದ ಆರೋಪಿಯನ್ನು ದಂಡಿಸುವಂತೆ ಪ್ರಾರ್ಥಿಸಿರುತ್ತಾರೆ.

14. ಆರೋಪಿ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ಚಾಸಾ–1 ರವರ ಗಂಡ ಹಾಗೂ ಆರೋಪಿ ಸಹೋದರರಾಗಿದ್ದು, ಅವರ ನಡುವೆ ಪಿತ್ರಾರ್ಜಿತ ಆಸ್ತಿಗೆ ಸಂಬಂಧಿಸಿದಂತೆ ವಿವಾದ ಇರುತ್ತದೆ. ಸದರಿ ವಿವಾದಗಳು ನ್ಯಾಯಾಲಯದಲ್ಲಿ ಇತ್ಯರ್ಥಕ್ಕಾಗಿ ಬಾಕಿ ಇರುತ್ತದೆ. ವಿವಾದಿತ ಆಸ್ತಿಯಲ್ಲಿ ಆರೋಪಿ ಸ್ವಾಧೀನದಲ್ಲಿ ಇರುತ್ತಾನೆ. ಆದ್ದರಿಂದ ಆತನನ್ನು ಸದರಿ ಆಸ್ತಿಯಿಂದ ಹೊರಹಾಕುವ ಉದ್ದೇಶದಿಂದ ಮತ್ತು ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಚಾಸಾ–1 ರವರ ನಿರಂತರವಾಗಿ ಆರೋಪಿತನ ವಿರುದ್ಧ ಸುಳ್ಳು ಪ್ರಕರಣಗಳನ್ನು ದಾಖಲಿಸಿಸುತ್ತಾ ಬಂದಿರುತ್ತಾರೆ, ಅದೇ ರೀತಿ ಈ ಪ್ರಕರಣವನ್ನು ಸಹ ದಾಖಲಿರುತ್ತಾರೆ. ಈ ಪ್ರಕರಣದ ಸಾಕ್ಷಿದಾರರು ಆರೋಪಿತರ ವಿರುದ್ಧ ಬಾಕಿ ಇರುವ ಎಲ್ಲಾ ಪ್ರಕರಣಗಳಲ್ಲಿಯೂ ಸಾಕ್ಷಿದಾರಾಗಿರುತ್ತಾರೆ. ಆದ್ದರಿಂದ ಪ್ರಸ್ತುತ ಪ್ರಕರಣವು ದ್ವೇಷದಿಂದ ದಾಖಲಿಸಿದ ಪ್ರಕರಣವಾಗಿದ್ದು, ಫಾಸಾ–1 ರವರು ತನ್ನ ಪಾಟೀ ಸವಾಲಿನಲ್ಲಿ ತನ್ನ ಮತ್ತು ಆರೋಪಿತನ ನಡುವೆ ಸಿವಿಲ್ ವಿವಾದ ಇರುವ ಸಂಗತಿಯನ್ನು ಒಪ್ಪಿರುತ್ತಾರೆ. ಆದ್ದರಿಂದ ಪ್ರಸ್ತುತ ಪ್ರಕರಣವು ಸಿವಿಲ್ ವಿವಾದದ ಪರಿಣಾಮ ಉದ್ಭವಿಸಿದ ಸುಳ್ಳು ಪ್ರಕರಣವಾಗಿರುತ್ತದೆ. ಆದ್ದರಿಂದ ಅಭಿಯೋಜನೆಯು ಆರೋಪಿತರ ವಿರುದ್ಧದ ಅಪರಾಧವನ್ನು ಸಾಬೀತುಪಡಿಸಲು ವಿಫಲವಾಗಿರುತ್ತದೆ. ಆದ್ದರಿಂದ ಆರೋಪಿತರನ್ನು ಬಿಡುಗಡೆ ಮಾಡುವಂತೆ ಪ್ರಾರ್ಥಿಸಿರುತ್ತಾರೆ.

15. ಫ್ರಾಸಾ-1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿಯು ತನ್ನ ಗಂಡನ ತಮ್ಮನಾಗಿದ್ದು, ತನ್ನ ಗಂಡನಿಗೆ ಸೇರಿದ ಆಸ್ತಿ ದುರ್ಗಿಗುಡಿ ಪ್ಯಾರಲಲ್ ರಸ್ತೆಯಲ್ಲಿ 2 ಮಳಿಗೆ ಮತ್ತು 1 ಮನೆ ಇರುತ್ತವೆ. ಡಿಸೆಂಬರ್ 2022 ರಂದು ಆರೋಪಿ ಮತ್ತು ಆತನ ಮಗ ಮಳಿಗೆ ಬಳಿ ಬಂದು ಚಾಸ 2 ಮತ್ತು ಕವಿತರವರ ಬಳಿ ಜಗಳ ಮಾಡುತ್ತಿದ್ದರು. ಆರೋಪಿತನು ಮತ್ತು ಆತನ ಮಗಳು ಕಾನೂನು ಕೈಗೆತ್ತಿಕೊಂಡು ಹೊಡೀತಿನಿ, ಬಡೀತಿನಿ ಎಂದು ಹೇಳಿ, ಚಾಸಾ-2 ರವರ ಮಳಿಗೆಯಲ್ಲಿದ್ದ ನನ್ನನ್ನು ಹಾಗೂ ಚಾಸಾ- 2 ರವರನ್ನು ಎಳೆದುಕೊಂಡು ಬಂದಿರುತ್ತಾರೆ ಮತ್ತು ನೀವು ಇಲ್ಲಿ ಏಕೆ ಬಂದಿದ್ದೀರ ನಿಮ್ಮನ್ನು ಸಾಯಿಸುತ್ತೇವೆ ಎಂದು ಕೂಗಾಡಿರುತ್ತಾರೆ. ಸದರಿ ಗಲಾಟೆಯಲ್ಲಿ ತನ್ನ ಕೈಗೆ, ಮೂಗಿಗೆ ಬೆರಳಿಗೆ ಪೆಟ್ಟಾಗಿರುತ್ತದೆ. ಆರೋಪಿ ಮತ್ತು ಆತನ ಮಗ ರಾಡ್ ನಿಂದ ತನಗೆ ಹೊಡೆದಿರುತ್ತಾರೆ. ಪೊಲೀಸರಿಗೆ ಪೋನ್ ಮೂಲಕ ಮಾಹಿತಿ ನೀಡಿದ್ದು, ಪೊಲೀಸರು ಸ್ಥಳಕ್ಕೆ ಬಂದಿರುತ್ತಾರೆ ಆ ಸಮಯದಲ್ಲಿ ಆರೋಪಿತರು ಓಡಿ ಹೋಗಿರುತ್ತಾರೆ. ಆ ನಂತರ ಪೊಲೀಸರು ತನ್ನನ್ನು ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ ಅಲ್ಲಿ ನನ್ನ ಹೇಳಿಕೆ ಪಡೆದಿರುತ್ತಾರೆ. ಆ ನಂತರ ತಾನು ದೂರು ನೀಡಿರುತ್ತೇನೆ. ದೂರು ನೀಡಿದ ನಂತರ ದಿನಾಂಕ 01-03-2022 ರಂದು ಪೊಲೀಸರು ಸ್ಥಳಕ್ಕೆ ಬಂದು ಮಹಜರ್ ಮಾಡಿ, ಕಚ್ಚಾ ನಕಾಶೆ ತಯಾರಿಸಿ, ಪೋಟೋ ತೆಗೆದಿರುತ್ತಾರೆ. ಪಂಚನಾಮೆ ಕಾಲಕ್ಕೆ ಪೊಲೀಸರು ಕೋಲು ಮತ್ತು ರಾಡನ್ನು ಜಪ್ತಿ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿದು ನಿಪಿ-1 ರಿಂದ 4 ದಾಖಲೆಗಳನ್ನು, ಮುದ್ದೆಮಾಲುಗಳನ್ನು ನೋಡಿ ಗುರುತಿಸಿರುತ್ತಾರೆ. ನಂತರ ಸಹಾಯಕ ಸರಕಾರಿ ಅಭಿಯೋಜಕರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ನ್ಯಾಯಾಲಯದ ಅನುಮತಿ ಪಡೆದು ಪಾಟೀ ಸವಾಲಿಗೆ ಒಳಪಡಿಸಿದಾಗ, ದಿನಾಂಕ 25.02.2022 ರಂದು ಮಧ್ಯಾಹ್ನ 3.00 ಗಂಟೆಗೆ ಘಟನೆ ನಡೆದಿರುತ್ತದೆ ಎನ್ನುವ ಸೂಚನೆಗಳನ್ನು ಒಪ್ಪಿರುತ್ತಾರೆ.

16. ನಿಪಿ-1 ದೂರಾಗಿದ್ದು, ಸದರಿ ದಾಖಲೆಯಲ್ಲಿ 1 ನೇ ಸಮಾನಾಂತರ ರಸ್ತೆಯಲ್ಲಿರುವ ಚಾಸಾ-1 ರವರ ಗಂಡನ ಮಾಲೀಕತ್ವಕ್ಕೆ ಸೇರಿದ್ದ ಮಳಿಗೆಯನ್ನು ಆರೋಪಿಯು ಅಕ್ರಮವಾಗಿ ಬೇರೆಯವರಿಗೆ ಬಾಡಿಗೆ ನೀಡಿದ ವಿಚಾರವನ್ನು ಚಾಸಾ-1 ರವರು ಕೇಳಿದ್ದಕ್ಕೆ, ದಿನಾಂಕ 25.02.2022 ರಂದು 3.00 ಗಂಟೆ ಸಮಾರಿಗೆ ಆರೋಪಿಯು ಚಾಸಾ-1 ರವರಿಗೆ ಅವಾಚ್ಯವಾಗಿ ಬೈದು, ಕೋಲು ಹಾಗೂ ಬ್ಯಾನರಿನ ರಾಡುಗಳನ್ನು ತೆಗೆದುಕೊಂಡು ಬಾರಿಸಿರುತ್ತಾನೆ ಹಾಗೂ ಈ ಬಾರಿ ಸ್ಥಳದಲ್ಲಿ ಗಲಾಟೆ ಮಾಡಿಸಿ ನನ್ನ ಹಾಗೂ ನನ್ನ ಪತಿಯ ವಿರುದ್ಧ ಕ್ರಿಮಿನಲ್ ಕೇಸ್ ಹಾಕುವುದಾಗಿ ತಿಳಿಸಿರುತ್ತಾನೆ ಹಾಗೂ ನಾನು ಪೊಲೀಸ್ ಕಂಪ್ಲೇಂಟ್ ನೀಡಿದಲ್ಲಿ ಜೀವಂತ ಉಳಿಸುವುದಿಲ್ಲ ಎಂದು ಬೆದರಿಕೆ ಹಾಕಿರುತ್ತಾನೆ ಎಂದು ನಮೂದಾಗಿರುತ್ತದೆ.

17. ಪ್ರಾಸಾ-2 ಮತ್ತು 3 ರವರು ಪಂಚಸಾಕ್ಷಿದಾರರಾಗಿದ್ದು, ಅಭಿಯೋಜನೆಗೆ ಸಂಪೂರ್ಣವಾಗಿ ಬೆಂಬಲಿಸಿ ಸಾಕ್ಷಿ ನುಡಿದಿರುತ್ತಾರೆ. ತಮ್ಮ ಮುಖ್ಯವಿಚಾರಣೆಯಲ್ಲಿ, 2021-22 ನೇ ಸಾಲಿನಲ್ಲಿ ಚಾಸಾ-1 ಮತ್ತು ಆರೋಪಿತನ ನಡುವೆ ಗಲಾಟೆಯಾದ ವಿಚಾರವಾಗಿ ಘಟನಾ ಸ್ಥಳಕ್ಕೆ ಪೊಲೀಸರು ಬಂದಿದ್ದು, ಪೊಲೀಸರು ಸ್ಥಳದಲ್ಲಿ ಮಹಜರ್ ಮಾಡಿ, ತಮ್ಮ ಸಹಿಯನ್ನು ಪಡೆದಿರುತ್ತಾರೆ, ಪೋಟೋ ತೆಗೆದಿರುತ್ತಾರೆ. ಪೊಲೀಸರು ರಾಡು ಮತ್ತು ಕೋಲನ್ನು ಜಪ್ತು ಮಾಡಿರುತ್ತಾರೆ. ಆರೋಪಿತನು ದೊಣ್ಣೆ ಮತ್ತು ರಾಡನ್ನು ಹಿಡಿದು ಗಲಾಟೆ ಮಾಡಿರುತ್ತಾನೆ ಎಂದು ಸಾಕ್ಷಿ ನುಡಿದು ನಿಪಿ-2 ರಿಂದ 4 ಮತ್ತು 6 ದಾಖಲೆಗಳನ್ನು ನೋಡಿ ಗುರುತಿಸಿರುತ್ತಾರೆ.

18. ನಿಪಿ-2 ದಾಖಲೆಯು ಸ್ಥಳಪಂಚನಾಮೆಯಾಗಿದ್ದು, ದಿನಾಂಕ 01.03.2022 ರಂದು ಮಧ್ಯಾಹ್ನ 3.00 ಗಂಟೆ ಸಮಯದಲ್ಲಿ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಚಾಸಾ-4 ಮತ್ತು 5 ರವರ ಸಮಕ್ಷಮ ಪಂಚನಾಮ ಕ್ರಮ ಜರುಗಿಸಿದ್ದು, ಸದರಿ ಸ್ಥಳವು ಶಿವಮೊಗ್ಗ ನಗರ ದುರ್ಗಿಗುಡಿ 1 ನೇ ಸಮಾನಾಂತರ ರಸ್ತೆಯಲ್ಲಿ ಶ್ರೀಮತಿ ಆಶಾ ಕೋಂ ಪ್ರಕಾಶ್ ರವರಿಗೆ ಸೇರಿದ ಅಂಗಡಿಯ

ಬಳಿ ಕೃತ್ಯ ನಡೆದಿದ್ದು, ಸದರಿ ಸ್ಥಳವನ್ನು ಪರಿಶೀಲಿಸಲಾಗಿ ಸದರಿ ಸ್ಥಳದ ಚೆಕ್ಕುಬಂಧಿ ಪೂರ್ವಕ್ಕೆ ಹೃದಯ ಕ್ಲಿನಿಕ್, ಪಶ್ಚಿಮಕ್ಕೆ ಆಸ್ಪತ್ರೆ ಮತ್ತು ಪ್ರಿಂಟರ್ ಇದ್ದು, ಉತ್ತರಕ್ಕೆ ರಸ್ತೆ ನಂತರ ಸ್ಪರ್ಶ ಆಸ್ಪತ್ರೆ ಹಾಗೂ ದಕ್ಷಿಣಕ್ಕೆ ಪಿರ್ಯಾದುದಾರರ ಮಳಿಗೆ ಇರುತ್ತದೆ ಎಂದು ನಮೂದಾಗಿರುತ್ತದೆ.

19. ಫ್ರಾಸಾ-4 ರವರು ತಮ್ಮ ಮುಖ್ಯವಿಚಾರಣೆಯಲ್ಲಿ, ದಿನಾಂಕ 01.03.2022 ರಂದು ಬೆಳಗ್ಗೆ 10 ಗಂಟೆಗೆ ಠಾಣೆಗೆ ಚಾಸಾ-1 ರವರು ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ ಠಾಣಾ ಗುನ್ನ ನಂ. 117/22 ರಡಿಯಲ್ಲಿ ಪ್ರಥಮ ವರ್ತಮಾನ ವರದಿ ದಾಖಲಿಸಿ, ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಮಧ್ಯಾಹ್ನ 1-30 ರಿಂದ 2-30 ರವರೆಗೆ ಚಾಸ 4 ಮತ್ತು 5 ರವರ ಸಮಕ್ಷಮ ಚಾಸಾ- 1 ತೋರಿಸಿದ ಕೃತ್ಯ ನಡೆದ ಸ್ಥಳದಲ್ಲಿ ಪಂಚನಾಮ ಕ್ರಮ ಜರುಗಿಸಿದ್ದು, ಆ ಸಮಯದಲ್ಲಿ ಚಾಸಾ- 1 ರವರು 1 ವರೆ ಅಡಿ ಉದ್ದದ ರಾಡ್ ಮತ್ತು 2 ವರೆ ಅಡಿ ಉದ್ದದ ಕೋಲನ್ನು ಹಾಜರು ಪಡಿಸಿದ್ದು ,ಅವುಗಳನ್ನು ಜಪ್ತು ಮಾಡಿರುತೇನೆ ಮತ್ತು ಕಡತಕ್ಕೆ ಅಳವಡಿಸಿಕೊಂಡಿರುತ್ತೆನೆ. ಚಾಸಾ- 2 ಮತ್ತು 3 ರವರ ಹೇಳಿಕೆ ದಾಖಲಿಸಿರುತೇನೆ. ಪಂಚನಾಮೆ ಕಾಲಕ್ಕೆ ಕಚ್ಚಾ ನಕಾಶೆ ತಯಾರಿಸಿ ಪೋಟೋ ತೆಗದಿರುತ್ತೇನೆ. ನಂತರ ತನಿಖೆ ಪೂರ್ಣಗೊಳಿಸಿ ಆರೋಪಿತನ ವಿರುದ್ಧ ಅಂತಿಮ ವರದಿ ದಾಖಲಿಸಿರುತ್ತೇನೆ ಎಂದು ಸಾಕ್ಷಿ ನುಡಿದು ನಿಪಿ-1 ರಿಂದ 8 ದಾಖಲೆಗಳನ್ನು, ಮುದ್ದೆಮಾಲುಗಳನ್ನು ಹಾಗೂ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

20. ನಿಪಿ-1 ರಂತೆ ಪ್ರಸ್ತುತ ಪ್ರಕರಣದ ಘಟನೆಯು 25.02.2022 ರಂದ ಮಧ್ಯಾಹ್ನ 3.00 ಗಂಟೆ ಸುಮಾರಿಗೆ ನಡೆದಿರುತ್ತದೆ. ಆದರೆ, ಸದರಿ ಘಟನೆಗೆ ಸಂಬಂಧಿಸಿದಂತೆ ಫ್ರಾಸಾ-1 ರವರು ದಿನಾಂಕ 01.03.2022 ರಂದು ದೊಡ್ಡಪೇಟೆ ಪೊಲೀಸ್ ಠಾಣೆಗೆ ದೂರು ನೀಡಿರುತ್ತಾರೆ. ನಿಪಿ-7 ದಾಖಲೆಯು ಪ್ರಥಮ ವರ್ತಮಾನ ವರದಿವಾಗಿದ್ದು, ಸದರಿ ದಾಖಲೆಯಲ್ಲಿ

ಘಟನೆಯ ದಿನಾಂಕ ಮತ್ತು ಸಮಯ ದಿನಾಂಕ 25.02.2022 ಮಧ್ಯಾಹ್ಞ 3.00 ಗಂಟೆ ಆಗಿರುತ್ತದೆ. ಠಾಣೆಯಲ್ಲಿ ವರ್ತಮಾನ ಸ್ವೀಕರಿಸಿದ ಸಮಯ ದಿನಾಂಕ 01.03.2022 ಬೆಳಗ್ಗೆ 10.00 ಗಂಟೆ ಆಗಿರುತ್ತದೆ. ನಿಪಿ-7 ರಂತೆ ಕೃತ್ಯ ನಡೆದ ಸ್ಥಳದಿಂದ ಪೊಲೀಸ್ ಠಾಣೆಗೆ ಇರುವ ದೂರ ಕೇವಲ 3.00 ಕಿ. ಮೀ. ಇರುತ್ತದೆ ಮತ್ತು ತಡವಾಗಿ ದೂರು ನೀಡಲು ಕಾರಣವೇನು ಎನ್ನುವ ಸಂಗತಿಯನ್ನು ನಿಪಿ-7 ದಾಖಲೆಯಲ್ಲಿ ಉಲ್ಲೇಖಿಸಿರುವುದಿಲ್ಲ. ನಿಪಿ-1 ದೂರಿನಲ್ಲಿಯೂ ಸಹ ಕಾಲವಿಳಂಬದೊಂದಿಗೆ ದೂರು ದಾಖಲಿಸಲು ಕಾರಣವೇನು ಎನ್ನುವ ಸಂಗತಿಯನ್ನು ಉಲ್ಲೇಖಿಸಿರುವುದಿಲ್ಲ ಹಾಗೂ ನಿಪಿ-1 ದಾಖಲೆಯಲ್ಲಿ ದಿನಾಂಕವನ್ನು ನಂತರ ಸೇರ್ಪಡೆ ಮಾಡಿರುವುದು ಕಂಡು ಬರುತ್ತದೆ. ಈ ರೀತಿ ಸೇರ್ಪಡೆ ಮಾಡಿದ ಬಗ್ಗೆ ಯಾವುದೇ ರೀತಿಯ ಸಹಿ ಅಥವಾ ವಿವರಣೆ ಇರುವುದಿಲ್ಲ. ಈಗಾಗಲೇ ಈ ಮೇಲೆ ಚರ್ಚಿಸಿದಂತೆ, ಘಟನೆ ನಡೆದ ತಕ್ಷಣ ಚಾಸಾ-1 ರವರು ದೊಡ್ಡಪೇಟೆ ಪೊಲೀಸ್ ಠಾಣೆಗೆ ದೂರು ನೀಡಿರುವುದಿಲ್ಲ. ನಿಪಿ-7 ರಂತೆ ಕೃತ್ಯ ನಡೆದ ಸ್ಥಳದಿಂದ ದೊಡ್ಡಪೇಟೆ ಪೊಲೀಸ್ ಠಾಣೆಯು ಕೇವಲ 3 ಕಿ ಮೀ ದೂರದಲ್ಲಿರುತ್ತದೆ. ಆದ್ದರಿಂದ ಕೃತ್ಯ ನಡೆದ 4 ದಿನಗಳ ನಂತರ ತಡವಾಗಿ ದೂರು ನೀಡಲು ಕಾರಣವೇನು ಎನ್ನುವ ಬಗ್ಗೆ ಯಾವುದೇ ವಿವರಣೆ ನೀಡಿರುವುದಿಲ್ಲ.

21. ಈ ಹಂತದಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ Saptal Singh Vs. State of Hariyana 2010 (8) SCC 714 ತೀರ್ಪನ್ನು ಉಲ್ಲೇಖಿಸುವುದು ಸೂಕ್ತವಾಗಿರುತ್ತದೆ. ಸದರಿ ಉಲ್ಲೇಖಿತ ತೀರ್ಪಿನಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಈ ಕೆಳಕಂಡಂತೆ ಹೇಳಿರುತ್ತದೆ.

> "This Court has consistently highlighted the reasons, objects and means of prompt lodging of FIR. Delay in lodging FIR more often than not, results in embellishment and

exaggeration, which is a creature of an afterthought. A delayed report not only gets bereft of the advantage of spontaneity, the danger of the introduction of a coloured version, an exaggerated account of the incident or a concocted story as a result of deliberations and consultations, also creeps in, casting a serious doubt on its veracity. Thus, FIR is to be filed more promptly and if there is any delay, the prosecution must furnish a satisfactory explanation for the same for the reason that in case the substratum of the evidence given by the complainant/informant is found to be unreliable, the prosecution case has to be rejected."

22. ಈ ಮೇಲಿನ ಉಲ್ಲೇಖಿತ ತೀರ್ಪಿನಂತೆ ಅಭಿಯೋಜನೆಯು ದೂರು ದಾಖಲಿಸಲು ಉಂಟಾಗಿರುವ ಕಾಲವಿಳಂಬಕ್ಕೆ ಸೂಕ್ತ ಕಾರಣವನ್ನು ನೀಡದೇ ಇದ್ದಲ್ಲಿ, ಅಭಿಯೋಜನೆ ಪ್ರಕರಣವು ನಂಬಲಾರ್ಹವಾಗಿರುವುದಿಲ್ಲ ಮತ್ತು ಸದರಿ ಪ್ರಕರಣಕ್ಕೆ ಕಾಲವಿಳಂಬವು ಮಾರಕವಾಗಿ ಪರಿಣಮಿಸಿರುತ್ತದೆ ಎಂದು ಹೇಳಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ ದೂರು ದಾಖಲಿಸಲು ಉಂಟಾಗಿರುವ 4 ದಿನಗಳ ಕಾಲವಿಳಂಬಕ್ಕೆ ಯಾವುದೇ ಸೂಕ್ತ ಮತ್ತು ಸಮಂಜಸವಾದ ಕಾರಣಗಳನ್ನು ಅಭಿಯೋಜನೆಯು ನೀಡಿರುವುದಿಲ್ಲ, ಆದ್ದರಿಂದ ಸದರಿ ಸಂಗತಿಯು ಅಭಿಯೋಜನೆ ಪ್ರಕರಣಕ್ಕೆ ಮಾರಕವಾಗಿ ಪರಿಣಮಿಸಿರುತ್ತದೆ.

23. ಫ್ರಾಸಾ-1ರವರು ತನ್ನ ಪಾಟೀಸವಾಲಿನಲ್ಲಿ ಆರೋಪಿತನ ವಿರುದ್ಧ ಅಮಲ್ಜಾರಿ ಪ್ರಕರಣ ಸಂಖ್ಯೆ 168/2021 ಜಾರಿಯಲ್ಲಿ ಇರುತ್ತದೆ. ಮಳಿಗೆಯನ್ನು ಕವಿತಾರವರಿಗೆ ಬಾಡಿಗೆ ನೀಡಿದ ಬಗ್ಗೆ ಬಾಡಿಗೆ ಕರಾರು ಪತ್ರ ಇರುವುದಿಲ್ಲ. ಅದನ್ನು ನ್ಯಾಯಲಯಕ್ಕೆ

ಹಾಜರುಪಡಿಸಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಸದರಿ ಸಂಗತಿಗಳಿಂದ ಫ್ರಾಸಾ-1 ಮತ್ತು ಆರೋಪಿತನ ನಡುವೆ ಮಳಿಗೆಗೆ ಸಂಬಂಧಿಸಿದಂತೆ ವಿವಾದವಿದ್ದು, ಸದರಿ ವಿವಾದ ನ್ಯಾಯಾಲಯದಲ್ಲಿ ಇತ್ಯರ್ಥಕ್ಕಾಗಿ ಬಾಕಿ ಇರುತ್ತದೆ ಎನ್ನುವುದು ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಂಡು ಬರುತ್ತದೆ. ಪಕ್ಷಗಾರರ ನಡುವೆ ಸಿವಿಲ್ ವಿವಾದವಿದ್ದು, ಸದರಿ ಸಿವಿಲ್ ವಿವಾದಕ್ಕೆ ಸಂಬಂಧಿಸಿದಂತೆ ಕ್ರಿಮಿನಲ್ ಪ್ರಕರಣ ದಾಖಲಿಸಿದ ಸಂದರ್ಭದಲ್ಲಿ ಸಹಜವಾಗಿ ಸಿವಿಲ್ ವಿವಾದದ ಪರಿಣಾಮ ಕ್ರಿಮಿನಲ್ ಪ್ರಕರಣ ಉದ್ಭವಿಸುವುದು ಸಹಜವಾಗಿರುತ್ತದೆ. ಆದ್ದರಿಂದ ಪ್ರಸ್ತುತ ಪ್ರಕರಣವು ಸಹ ಸಿವಿಲ್ ವಿವಾದದ ಪರಿಣಾಮ ಉದ್ಭವಿಸಿರುವ ಸಾಧ್ಯತೆಯನ್ನು ತಳ್ಳಿಹಾಕುವಂತೆ ಇಲ್ಲ. ಅಲ್ಲದೇ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿ ಸಾಕ್ಷಿ ವಿಚಾರಣೆಗೆ ಒಳಪಡಿಸಲು ಅಭಿಯೋಜನೆಯು ವಿಫಲವಾಗಿರುತ್ತದೆ. ಆದ್ದರಿಂದ ಫ್ರಾಸಾ-1ರವರ ನುಡಿ ಸಾಕ್ಷ್ಯವು ನಂಬಲಾರ್ಹವಾಗಿರುವುದಿಲ್ಲ.

24. ಫ್ರಾಸಾ-2 ಮತ್ತು 3ರವರು ಸ್ಥಳ ಪಂಚನಾಮೆಯ ಸಾಕ್ಷಿದಾರರಾಗಿದ್ದು, ಅಭಿಯೋಜನೆಯನ್ನು ಸಂಪೂರ್ಣವಾಗಿ ಬೆಂಬಲಿಸಿ ಸಾಕ್ಷಿ ನುಡಿದಿರುತ್ತಾರೆ. ಆದರೆ ಫ್ರಾಸಾ-2 ರವರು ತನ್ನ ಪಾಟೀಸವಾಲಿನಲ್ಲಿ ಚಾಸಾ-1ರವರು ನನಗೆ ತುಂಬಾ ಪರಿಚಯ ಇರುತ್ತಾರೆ. ಪಂಚನಾಮೆಯನ್ನು ಸ್ವಲ್ಪ ಓದಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ನಾನು ಮತ್ತು ಚಾಸಾ-1 ರವರು ಸ್ನೇಹಿತರಾಗಿದ್ದು, ತುಂಬಾ ಪರಿಚಯ ಇರುತ್ತದೆ. ಪಂಚನಾಮೆಯಲ್ಲಿ ಬರೆದಿರುವ ಸಂಗತಿಗಳು ಸ್ವಲ್ಪ ಓದಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ನಿಪಿ-2 ಪಂಚನಾಮೆಯಲ್ಲಿ ಫ್ರಾಸಾ-2 ಮತ್ತು 3 ರವರ ಸಮಕ್ಷಮ, ಫ್ರಾಸಾ-2 ಮತ್ತು 3 ರವರು ಹೇಳಿ ಬರೆಯಿಸಿದಂತೆ ಪಂಚನಾಮೆ ಬರೆದಿರುವುದಾಗಿ ಮತ್ತು ಪಿರ್ಯಾದುದಾರರು ಹಾಜರುಪಡಿಸಿದ 1ವರೆ ಅಡಿ ಉದ್ದದ ಕಬ್ಬಿಣದ ರಾಡ್ ನ್ನು ಮತ್ತು ಕೋಲನ್ನು ಹಾಜರುಪಡಿಸಿದ್ದು, ಅವುಗಳನ್ನು ಜಪ್ತು ಮಾಡಿರುವುದಾಗಿ

ನಮೂದಾಗಿರುತ್ತದೆ. ಅದರೆ ಸದರಿ ರಾಡ್ ಮತ್ತು ಕೋಲನ್ನು ಚಾಸಾ–1 ರವರು ಎಲ್ಲಿಂದ ತಂದು ಹಾಜರುಪಡಿಸಿರುತ್ತಾರೆ ಎನ್ನುವ ಸಂಗತಿಯನ್ನು ಪಂಚನಾಮೆಯಲ್ಲಿ ಉಲ್ಲೇಖಿರುವುದಿಲ್ಲ ಹಾಗೂ ಸದರಿ ಮುದ್ದೆಮಾಲು 1 ಮತ್ತು 2 ಅನ್ನು ಸ್ಥಳದಲ್ಲಿ ಇದ್ದವೇ ಅಥವಾ ಇಲ್ಲವೇ ಎನ್ನುವ ಸಂಗತಿಯನ್ನು ಉಲ್ಲೇಖಿಸಿರುವುದಿಲ್ಲ ಮತ್ತು ಸದರಿ ಮುದ್ದೆಮಾಲುಗಳು ನಿಪಿ–4 ಮತ್ತು 5 ಫೋಟೋಗಳಲ್ಲಿಯೂ ಸಹ ಕಂಡುಬರುವುದಿಲ್ಲ. ಆದ್ದರಿಂದ ಅಭಿಯೋಜನೆಯು ಮುದ್ದೆಮಾಲು1 ಮತ್ತು 2 ಅನ್ನು ಯಾವ ಸ್ಥಳದಿಂದ ಜಪ್ತು ಮಾಡಲಾಗಿದೆ ಮತ್ತು ಸದರಿ ಮುದ್ದೆಮಾಲುಗಳನ್ನು ಚಾಸಾ–1 ರವರು ಎಲ್ಲಿಂದ ತಂದು ಹಾಜರುಪಡಿಸಿರುತ್ತಾರೆ ಎನ್ನುವ ಸಂಗತಿಯನ್ನು ನಿಸಂಶಯವಾಗಿ ಸಾಬೀತುಪಡಿಸಲು ವಿಫಲವಾಗಿರುತ್ತದೆ. ಅಲ್ಲದೇ ಫ್ರಾಸಾ–2 ಮತ್ತು 3 ರವರು ಪಂಚನಾಮೆಯನ್ನು ಓದಿ ಸಹಿ ಮಾಡಿರುತ್ತೇವೆ ಎಂದು ಸಾಕ್ಷಿ ನುಡಿದಿರುತ್ತಾರೆ. ನಂತರ ಸ್ವಲ್ಪ ಓದಿರುತ್ತೇವೆ ಎಂದು ಸಾಕ್ಷಿ ನುಡಿದಿರುತ್ತಾರೆ. ಆದ್ದರಿಂದ ಫ್ರಾಸಾ–2 ಮತ್ತು 3 ರವರು ಪಂಚನಾಮೆ ಸಮಯದಲ್ಲಿ ಘಟನಾ ಸ್ಥಳದಲ್ಲಿ ಹಾಜರಿದ್ದರು ಎನ್ನುವ ಸಂಗತಿಯು ಸಂಶಯಾಸ್ಪದವಾಗಿರುತ್ತದೆ.

25. ಫ್ರಾಸಾ–4 ರವರು ತನಿಖಾಧಿಕಾರಿಯಾಗಿದ್ದು ಅಭಿಯೋಜನೆಯನ್ನು ಬೆಂಬಲಿಸಿ ಸಾಕ್ಷಿ ನುಡಿದಿರುತ್ತಾರೆ. ಫ್ರಾಸಾ–4 ರವರು ತಮ್ಮ ಪಾಟೀಸವಾಲಿನಲ್ಲಿ ಆರೋಪಿ ಮಳಿಗೆಗೆ ಸಂಬಂಧಿಸಿದಂತೆ ಸಿವಿಲ್ ಪ್ರಕರಣ ದಾಖಲಿಸಿರುವ ಬಗ್ಗೆ ನನಗೆ ಮಾಹಿತಿ ಇಲ್ಲ, ವಿವಾದಿತ ಮಳಿಗೆಯ ದಾಖಲೆಗಳನ್ನು ಸ್ವೀಕರಿಸಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.. ಪ್ರಸ್ತುತ ಪ್ರಕರಣವು ಮಳಿಗೆಗೆ ಸಂಬಂಧಿಸಿದ ವಿವಾದದಿಂದ ಉಂಟಾಗಿರುತ್ತದೆ. ಆದ್ದರಿಂದ ಮಳಿಗೆಗೆ ಸಂಬಂಧಿಸಿದ ದಾಖಲೆಗಳು ಪ್ರಸ್ತುತ ಪ್ರಕರಣಕ್ಕೆ ಅಗತ್ಯವಾದ ದಾಖಲೆಗಳಾಗಿರುತ್ತವೆ. ಆದರೆ ಸದರಿ ದಾಖಲೆಗಳನ್ನು ತನಿಖಾಧಿಕಾರಿಯು ಸಂಗ್ರಹಿಸಿರುವುದಿಲ್ಲ ಹಾಗೂ ಚಾಸಾ–1 ಮತ್ತು ಆರೋಪಿತನ ನಡುವೆ ದಾಖಲಾಗಿರುವ ಮತ್ತು ವಿಚಾರಣೆಗಾಗಿ ಬಾಕಿ ಇರುವ ಹಾಗೂ ವಿಚಾರಣೆ ಮುಗಿದಿರುವ ಪ್ರಕರಣಗಳ ದಾಖಲೆಗಳನ್ನು ಸಹ

ಸಂಗ್ರಹಿಸಿರುವುದಿಲ್ಲ ಮತ್ತು ಹಾಜರುಪಡಿಸಿರುವುದಿಲ್ಲ. ಫ್ರಾಸಾ–4 ರವರ ನುಡಿ ಸಾಕ್ಷ್ಯವು ಪ್ರಕ್ರಿಯಾತ್ಮಕ ನುಡಿ ಸಾಕ್ಷ್ಯವಾಗಿದ್ದು ಸ್ವತಂತ್ರ ಸಾಕ್ಷಿದಾರರ ನುಡಿ ಸಾಕ್ಷ್ಯದ ಅನುಪಸ್ಥಿತಿಯಲ್ಲಿ ಮತ್ತು ಫ್ರಾಸಾ–1 ರಿಂದ 3 ರವರ ನುಡಿ ಸಾಕ್ಷ್ಯವು ನಂಬಲಾರ್ಹವಾಗಿಲ್ಲದ್ದರಿಂದ ಹಾಗೂ ಪ್ರಸ್ತುತ ಪ್ರಕರಣ ದಾಖಲಿಸಲು 4 ದಿನಗಳ ಕಾಲವಿಳಂಬ ಇರುವುದರಿಂದ ಫ್ರಾಸಾ–4 ರವರ ಸಾಕ್ಷ್ಯವು ನಂಬಲಾರ್ಹವಾಗಿರುವುದಿಲ್ಲ.

26. ಈ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ ಅಭಿಯೋಜನೆಯು ಆರೋಪಿ ವಿರುದ್ಧದ ಅಪರಾಧಗಳನ್ನು ಸಾಭೀತು ಪಡಿಸಲು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ ಎನ್ನುವ ತೀರ್ಮಾನಕ್ಕೆ ಈ ನ್ಯಾಯಾಲಯವು ಬಂದಿರುತ್ತದೆ. ಆದ್ದರಿಂದ ಸಂಶಯಗಳ ಲಾಭವನ್ನು ಆರೋಪಿಗೆ ನೀಡತಕ್ಕದ್ದು ಎನ್ನುವುದು ಇತ್ಯರ್ಥ ಪಡಿಸಿದ ಕಾನೂನು ಆಗಿರುತ್ತದೆ. ಆದ್ದರಿಂದ ಈ ವಿಚಾರಣೆಯಲ್ಲಿ ಉದ್ಭವಿಸಿದ ಸಂಶಯದ ಲಾಭವನ್ನು ಆರೋಪಿಗೆ ನೀಡಿ ಬಿಡುಗಡೆಗೊಳಿಸುವುದು ಸೂಕ್ತವಾಗಿರುತ್ತದೆ ಎನ್ನುವ ತೀರ್ಮಾರ್ನಕ್ಕೆ ಈ ನ್ಯಾಯಾಲಯವು ಬಂದಿರುತ್ತದೆ. ಆದ್ದರಿಂದ ಈ ಮೇಲಿನ ಅಂಶ ಸಂಖ್ಯೆ 1 ರಿಂದ 3 ನ್ನು ***ನಕಾರಾತ್ಮಕವಾಗಿ*** ಉತ್ತರಿಸುತ್ತೇನೆ.

27. **ಅಂಶ ಸಂಖ್ಯೆ 4:**–ಈ ಮೇಲ್ಕಂಡ ಕಾರಣಗಳಿಗಾಗಿ ಆರೋಪಿ ವಿರುದ್ಧ ಹೊರಿಸಿದ ಆರೋಪ ಸಾಬೀತಾಗಿರುವುದಿಲ್ಲ. ಅದರಂತೆ ಈ ಕೆಳಗಿನಂತೆ ಮಾಡಿದ;

## ಆದೇಶ

ದಂಡ ಪ್ರಕ್ರಿಯ ಸಂಹಿತೆ ಕಲಂ 248(1) ರಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಭಾರತೀಯ ದಂಡ ಸಂಹಿತೆ ಕಲಂ.504, 324, 506 ರಡಿಯಲ್ಲಿ ಮಾಡಿದ ದೋಷಾರೋಪಣೆಯಿಂದ ಆರೋಪಿಯನ್ನು ನಿರ್ದೋಷಿ ಎಂದು ಬಿಡುಗಡೆ ಮಾಡಲಾಗಿದೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ.437 (ಎ) ರಡಿಯಲ್ಲಿ ಆರೋಪಿ ಬರೆದುಕೊಟ್ಟ ಜಾಮೀನು ಮತ್ತು ಮುಚ್ಚಳಿಕೆ ಆರು ತಿಂಗಳ ಕಾಲ ಜಾರಿಯಲ್ಲಿ ಇರತಕ್ಕದ್ದು ಎಂದು ಆದೇಶಿಸಲಾಗಿದೆ.

ಮುದ್ದೆಮಾಲು-1 ಕೋಲನ್ನು ಅನುಪಯುಕ್ತ ವಸ್ತುವಾಗಿರುವುದರಿಂದ ಮೇಲ್ಮನವಿ ಮುಗಿದ ನಂತರ ನಾಶಪಡಿಸಲು ಹಾಗೂ ಮುದ್ದೆಮಾಲು-2 ರಾಡನ್ನು ಉಪಯುಕ್ತ ವಸ್ತುವಾಗಿರುವುದರಿಂದ ಮೇಲ್ಮನವಿ ಮುಗಿದ ನಂತರ ಮುಟ್ಟುಗೋಲು ಹಾಕಿಕೊಳ್ಳಲು ಕಚೇರಿಗೆ ಈ ಮೂಲಕ ನ್ಯಾಯಾಲಯವು ಆದೇಶಿಸಲಾಗಿದೆ.

(ನನ್ನ ಉಕ್ತಲೇಖನದ ಪ್ರಕಾರ ಶೀಘ್ರಲಿಪಿಗಾರರು ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ ನಂತರ ಅದರಲ್ಲಿದ್ದ ಲೋಪದೋಷಗಳನ್ನು ತಿದ್ದಿ ಇಂದು ದಿನಾಂಕ 24.07.2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

(ಶ್ರೀ ಸಿದ್ದರಾಜು ಎನ್.ಕೆ.)
2 ನೇ ಪ್ರ.ದ.ನ್ಯಾ ದಂಡಾಧಿಕಾರಿಗಳು, ಶಿವಮೊಗ್ಗ.

## ಅನುಬಂಧ

**ಅಭಿಯೋಜನೆ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ:**

ಪ್ರಾಸಾ-1: ಶ್ರೀಮತಿ ಆಶಾ
ಪ್ರಾಸಾ-2: ಎಂ ವಿ ತಿಪ್ಪೇಸ್ವಾಮಿ
ಪ್ರಾಸಾ-3: ಶ್ರೀಮತಿ ಪದ್ಮಾವತಿ
ಪ್ರಾಸಾ-4: ಸಿ ಟಿ ರಾಮಣ್ಣ

**ಅಭಿಯೋಜನೆ ಪರ ನಿಶಾನಿಸಲಾದ ದಾಖಲೆಗಳ ಪಟ್ಟಿ:**

| | | |
|---|---|---|
| ನಿಪಿ-1 | : | ದೂರು |
| ನಿಪಿ-1(ಎ)(ಬಿ) | : | ಸಹಿ |
| ನಿಪಿ-2 | : | ಸ್ಥಳ ಮಹಜರ್ |

| | | |
|---|---|---|
| ನಿಪಿ–2(ಎ ರಿಂದ ಡಿ ) | : | ಸಹಿ |
| ನಿಪಿ–3 | : | ಕಚ್ಚಾನಕಾಶೆ |
| ನಿಪಿ–3(ಎ ರಿಂದ ಡಿ) | : | ಸಹಿ |
| ನಿಪಿ–4,5 | : | ಪೋಟೋಗಳು |
| ನಿಪಿ–4,5(ಎ) | : | ಸಹಿ |
| ನಿಪಿ–6 | : | ನೋಟೀಸ್ |
| ನಿಪಿ–6(ಎ,ಬಿ,ಸಿ) | : | ಸಹಿ |
| ನಿಪಿ–7 | : | ಪ್ರಥಮ ವರ್ತಮಾನ ವರದಿ |
| ನಿಪಿ–7(ಎ) | : | ಸಹಿ |
| ನಿಪಿ–8 | : | ಕಲಂ 65 ಬಿ ಪ್ರಮಾಣ ಪತ್ರ |
| ನಿಪಿ–8(ಎ) | : | ಸಹಿ |

**ಅಭಿಯೋಜನೆ ಪರ ಗುರುತಿಸಲಾದ ಮುದ್ದೆಮಾಲುಗಳ ಪಟ್ಟಿ:**

| | | |
|---|---|---|
| ಮುದ್ದೆಮಾಲು–1 | : | ಕೋಲು |
| ಮುದ್ದೆಮಾಲು–2 | : | ರಾಡು |

**ಆರೋಪಿ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ:**

–ಇಲ್ಲ–

**ಆರೋಪಿ ಪರ ನಿಶಾನಿಸಲಾದ ದಾಖಲೆಗಳ ಪಟ್ಟಿ:**

–ಇಲ್ಲ–

2 ನೇ ಪ್ರ.ದ.ನ್ಯಾ ದಂಡಾಧಿಕಾರಿಗಳು,
ಶಿವಮೊಗ್ಗ.